ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\8138\2015\ಸನಿಕಾಸ–1

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:24/04/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ದೂರುದಾರರಾದ ಶ್ರೀಮತಿ.ಶಿವಮ್ಮ ಕೋಂ ಲೇ.ಹುಚ್ಚೇಗೌಡ, ಚನ್ನಶೆಟ್ಟಿ ಹಳ್ಳಿ ಕಸಬಾ ಹೋಬಳಿ, ಗುಬ್ಬಿ ತಾಲ್ಲೂಕ್, ತುಮಕೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*******

ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕ್ ಕಸಬಾ ಹೋಬಳಿ ಚನ್ನಶೆಟ್ಟಿಹಳ್ಳಿಯ ನಿವಾಸಿಯಾದ ಶ್ರೀಮತಿ.ಶಿವಮ್ಮ ಕೋಂ ಲೇ.ಹುಚ್ಚೇಗೌಡ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕ್ ಅಮ್ಮನಘಟ್ಟ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿದ್ದ ಶ್ರೀ.ಮಂಜುನಾಥ (ಪ್ರಸ್ತುತ ತಿಪಟೂರು ತಾಲ್ಲೂಕಿನ ಹಿಂಡಿಸಕೆರೆ ಗ್ರಾಮ ಪಂಚಾಯತ್) (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕ್ ಅಮ್ಮನಘಟ್ಟ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಬರುವ ಅಮ್ಮನಘಟ್ಟ ಗ್ರಾಮದ ಖಾತಾ ನಂ.46, 48, 150 ಮತ್ತು ಚನ್ನಶೆಟ್ಟಿ ಹಳ್ಳಿ ಗ್ರಾಮದ ಖಾತಾ ನಂ.175ರಲ್ಲಿನ ವಿಸ್ತೀರ್ಣ 30x40 ಅಡಿಯುಳ್ಳ ನಿವೇಶನವಿದೆ, ದೂರುದಾರರ ಪತಿ ಸುಮಾರು 20 ವರ್ಷಗಳ ಹಿಂದೆ ಮರಣ ಹೊಂದಿದ್ದು, ಪವತಿ ಖಾತೆಯ ಆಧಾರದ ಮೇಲೆ ಖಾತಾ, ಪಹಣಿ ಮಾಡಲು ಎದುರುದಾರರಿಗೆ ಅರ್ಜಿ ಸಲ್ಲಿಸಿದ್ದು, ಎದುರುದಾರರು ಖಾತಾ ಬದಲಾವಣೆ ಮಾಡಿಕೊಳ್ಳುವುದಾಗಿ ಒಪ್ಪಿ, ಆ ನಂತರ ಹೇರೂರು ಗ್ರಾಮದ ವಾಸಿಯಾದ ಶ್ರೀ.ಚನ್ನಬಸವಯ್ಯ ಆತನ ಪತ್ನಿ ಶ್ರೀಮತಿ.ಚನ್ನಮ್ಮ, ಮಗಳು ಶ್ರೀಮತಿ.ಗಂಗಾಂಭಿಕೆ ಹಾಗೂ ಅವರ ಪತಿ ಶ್ರೀ.ಯೋಗೇಶ್ ರವರುಗಳು ಕೂಡಿ ಸದರಿ ಸ್ವತ್ತುಗಳನ್ನು ತಮ್ಮ ಹೆಸರಿಗೆ ಖಾತಾ ಬದಲಾವಣೆ ಮಾಡಿಸಿಕೊಳ್ಳಲು ಎದುರುದಾರರಿಗೆ ಹಣ ಕೊಟ್ಟು ಸಮ್ಮತಿ ಸೂಚಿಸಲು ಹಿಂಸೆ ನೀಡಿರುವುದಾಗಿ ಹೇಳಿದ್ದಾರೆ.

3. ಮೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ದೂರುದಾರರು ದಿನಾಂಕ:20/02/15ರಂದು ತಮ್ಮ ಪತಿಯ ಹೆಸರಿನಲ್ಲಿರುವ ಸ್ವತ್ತುಗಳನ್ನು ಖಾತಾ ಮಾಡಿಕೊಡಬೇಕೆಂದು ಕೋರಿ ಅರ್ಜಿ ಸಲ್ಲಿಸಿದ್ದು, ಈ ಬಗ್ಗೆ ದಾಖಲೆಗಳನ್ನು ಪರಿಶೀಲಿಸಲಾಗಿ, ಸದರಿ ಸ್ವತ್ತುಗಳು ಗ್ರಾಮ ಠಾಣಾ ಆಸ್ತಿಗಳಾಗಿದ್ದು, ಸದರಿ ಸ್ವತ್ತುಗಳ ಖಾತಾ ಬದಲಾವಣೆ ಮಾಡಲು ಇ–ಸ್ವತ್ತು ತಂತ್ರಾಂಶಕ್ಕೆ ದಾಖಲೆಗಳನ್ನು ಒದಗಿಸಿಕೊಡಬೇಕೆಂದು ದೂರುದಾರರಿಗೆ ತಿಳಿಸಿದ್ದು, ದೂರುದಾರರು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ಅಲ್ಲದೇ, ಸದರಿ ಸ್ವತ್ತಿನ ಅಕ್ಕ–ಪಕ್ಕದ ನಿವೇಶನದ ಮಾಲೀಕರನ್ನು ಹಾಜರುಪಡಿಸಿ, ಹೇಳಿಕೆ ನೀಡುವಂತೆ ದೂರುದಾರರಿಗೆ ತಿಳಿಸಿದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲ. ಸ್ಥಳ ಪರಿಶೀಲನೆ ಮಾಡಿ, ಅಕ್ಕ–ಪಕ್ಕದ ಸ್ವತ್ತಿನ ಮಾಲೀಕರನ್ನು ಕೇಳಿಕೊಂಡರೂ ಸಹ ಯಾರೂ ಸಹ ಸಹಕಾರ ನೀಡಿಲ್ಲ. ದಿನಾಂಕ:29/05/15ರಂದು ತಹಶೀಲ್ದಾರ್, ಗುಬ್ಬಿ ರವರಿಗೆ ಅರ್ಜಿದಾರರು ನೀಡಿದ ದಾಖಲೆಗಳ ಮೇಲೆ ಖಾತಾ ಬದಲಾವಣೆ ಮಾಡಲು ನಮೂನೆ–9 ಮತ್ತು 11ನ್ನು ನೀಡುವ ಬಗ್ಗೆ ಗ್ರಾಮ ಠಾಣಾ ಸರ್ವೆ ನಕ್ಷೆ ನೀಡಬೇಕೆಂದು ಅರ್ಜಿ ನೀಡಲಾಗಿದೆ. ಈ ಬಗ್ಗೆ ತಹಶೀಲ್ದಾರ್‌ರವರು ಯಾವುದೇ ಮಾಹಿತಿ ನೀಡಿಲ್ಲವೆಂದು ಹೇಳಿದ್ದಾರೆ.

4. ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಎದುರುದಾರರ ಆಕ್ಷೇಪಣೆಯ ಅಂಶಗಳನ್ನು ಅಲ್ಲಗಳೆದು, ದೂರಿನಲ್ಲಿನ ಅಂಶಗಳನ್ನೇ ಪುನರುಚ್ಛರಿಸಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:–

ಸ್ವತ್ತಿನ ಸಂಖ್ಯೆ:46, 48 ಮತ್ತು 150ರ ಸ್ವತ್ತುಗಳು ಮೂಲತಃ ದೂರುದಾರರ ಪತಿ ಶ್ರೀ.ಹುಚ್ಚೇಗೌಡ ಬಿನ್ ಪಟೇಲ್ ಸಿದ್ದೇಗೌಡ ರವರ ಹೆಸರಿನಲ್ಲಿ ನಮೂದಾಗಿದ್ದು, ಈ ಬಗ್ಗೆ ಎದುರುದಾರರ ಪಂಚಾಯತಿಯ ಡಿಮ್ಯಾಂಡ್ ವಹಿಯ ಪ್ರತಿಯಲ್ಲಿ ನಮೂದಾಗಿದೆ. ಸ್ವತ್ತಿನ ಸಂಖ್ಯೆ:46, 48 ಮತ್ತು 150ರ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ದೂರುದಾರರು ಖಾತಾ ಬದಲಾವಣೆ ಮಾಡಿಕೊಡುವಂತೆ ಎದುರುದಾರರಿಗೆ ಅರ್ಜಿ ಸಲ್ಲಿಸಿದ್ದು, ಎದುರುದಾರರು ಸದರಿ ಸ್ವತ್ತು ಗ್ರಾಮ ಠಾಣಾಗೆ ಸಂಬಂಧಿಸಿದ್ದರಿಂದ, ಖಾತಾ ಬದಲಾವಣೆ ಮಾಡಲು ನಮೂನೆ–9 ಮತ್ತು 11ನ್ನು ಕೋರಿ ಗುಬ್ಬಿ ತಹಶೀಲ್ದಾರ್‌ರವರಿಗೆ ಮನವಿ ಸಲ್ಲಿಸಿದ್ದಾಗಿ ಹೇಳಿದ್ದಾರೆ. ಆದರೆ, ಎದುರುದಾರರ ಕಛೇರಿಯ ದಾಖಲೆಗಳ ಪ್ರಕಾರ ಸದರಿ ಸ್ವತ್ತುಗಳು ದೂರುದಾರರ ಪತಿ ಶ್ರೀ.ಹುಚ್ಚೇಗೌಡರ ಹೆಸರಿನಲ್ಲಿದ್ದು, ಸದರಿಯವರು ಮೃತಪಟ್ಟಿದ್ದು, ಪವತಿ ವಾರಸು ಆಧಾರದ ಮೇಲೆ ಸೂಕ್ತ ದಾಖಲೆಗಳನ್ನು ಪಡೆದು ದೂರುದಾರರ ಹೆಸರಿಗೆ ಕರ್ನಾಟಕ ಭೂ ಕಂದಾಯ ಅಧಿನಿಯಮ ಕಲಂ 128ರಡಿ ಕ್ರಮ ಜರುಗಿಸಿ ಖಾತಾ ಬದಲಾವಣೆ ಮಾಡಬೇಕಾಗಿದೆ. ಸದರಿ ಸ್ವತ್ತು ಗ್ರಾಮ ಠಾಣಾ ಸ್ವತ್ತು ಎಂಬ ಬಗ್ಗೆ

ಎದುರುದಾರರು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ಸದರಿ ಸ್ವತ್ತುಗಳು ಪ್ರಸ್ತುತ 2013–14ನೇ ಸಾಲಿನಲ್ಲಿಯೂ ಸಹ ದೂರುದಾರರ ಪತಿಯ ಹೆಸರಿನಲ್ಲಿದ್ದು, ಸದರಿ ದಾಖಲೆಗಳ ಆಧಾರದ ಮೇಲೆ ದೂರುದಾರರ ಹೆಸರಿಗೆ ಖಾತಾ ಬದಲಾವಣೆ ಮಾಡದೇ, ತೊಂದರೆ ನೀಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ.

6. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ಇಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

7. ಆದ್ದರಿಂದ, ಸ್ವತ್ತಿನ ಸಂಖ್ಯೆ:46, 48 ಮತ್ತು 150 ಗಳನ್ನು ದೂರುದಾರರ ಹೆಸರಿಗೆ ಖಾತಾ ಬದಲಾವಣೆ ಮಾಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 24/4/17.

(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)
ಉಪಲೋಕಾಯುಕ್ತ–2,
ಕರ್ನಾಟಕ ರಾಜ್ಯ.